<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊಸಕೋಟೆ.</u>

ಓ.ಎಸ್ ಸಂಖ್ಯೆ. **1171/2022** ಪಿ.ಡಬ್ಲೂ .1

ದಿನಾಂಕಃ 27-07-2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಮುಂದೂವರೆದ_ಪಾಟೀ ಸವಾಲುಃ- **1** ಮತ್ತು **2** ನೇ ಪ್ರತಿವಾದಿಗಳ ಪರ ವಕೀಲರಿಂದಃ-

ದಾವಾ ಐಟಂ ನಂ. 10 ರ ಜಮೀನು ಶಾಂತಪ್ಪನವರಿಗೆ ಕ್ರಯ ಆಗಿರುವ ಜಮೀನು ಎಂದರೆ ಹೌದು. ಸದರಿ ಕ್ರಯದಂತೆ 2 ನೇ ಪ್ರತಿವಾದಿಯ ಹೆಸರಿನಲ್ಲಿ ಕಂದಾಯದ ದಾಖಲೆಗಳು ಇದೆ ಎಂದರೆ ಹೌದು. ಅದೇ ರೀತಿ 2 ನೇ ಪ್ರತಿವಾದಿಯೇ ದಾವಾ ಐಟಂ ನಂ. 10 ರಲ್ಲಿ ಸ್ವಾದೀನದಲ್ಲಿದ್ದಾರೆ ಎಂದರೆ ಸಾಕ್ಷಿ ಜಂಟಿ ಸ್ವಾದೀನದಲ್ಲಿದ್ದಾರೆ ಎಂದು ನುಡಿಯುತ್ತಾರೆ. ನಾನು ದಾವಾ ಐಟಂ ನಂ. 10 ರಲ್ಲಿ ಜಂಟಿ ಸ್ವಾದೀನದಲ್ಲಿದ್ದೇನೆ ಎಂದು ತೋರಿಸಲು ದಾಖಲೆ ಹಾಜರು ಮಾಡಿಲ್ಲ. ಜಂಟಿಯಾಗಿ ಖಾತೆ ಮಾಡಿಸಿಕೊಳ್ಳಲು ಕಂದಾಯ ಅಧಿಕಾರರಿಗಳ ಮುಂದೆ ನಾನು ಯಾವುದೇ ಅರ್ಜಿ ಸಲ್ಲಿಸಿರುವುದಿಲ್ಲ. ದಾವಾ ಐಟಂ ನಂ. 10 2 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ನಮ್ಮ ತಂದೆಯವರು ಒಟ್ಟು ಕುಟುಂಬದಲ್ಲಿ ಇದ್ದಾಗ ಸಂಪಾದಿಸಿದ ಆಸ್ತಿ ಎಂದು ನುಡಿಯುತ್ತಾರೆ. ಸದರಿ ಆಸ್ತಿಯ ಖಾತೆಯನ್ನು ಜಂಟಿಯಾಗಿ ನಮೂದಿಸುವಂತೆ ನಿಮ್ಮ ತಂದೆ ಪ್ರಯತ್ನಿಸಿರುತ್ತಾರಾ ಎಂದರೆ ಸಾಕ್ಷಿ ನಾನು ಆ ಸಮಯದಲ್ಲಿ ಚಿಕ್ಕವನಾಗಿದ್ದು, 1 ನೇ ಪ್ರತಿವಾದಿ ಹಿರಿಯರಾದ ಕಾರಣ ಅವರ ಹೆಸರಿನಲ್ಲಿ ಖಾತೆ ನಮೂದು ಇರುವಂತೆ ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ಆ

ಸಮಯದಲ್ಲಿ ನನ್ನ ತಂದೆ ಬದುಕಿದ್ದಾಗ ದಾವಾ ಐಟಂ ನಂ. 10 ಕ್ರಯ ಪತ್ರವನ್ನು ಜಂಟಿಯಾಗಿ ಬರೆಸುವಂತೆ ನಾನು ನನ್ನ ತಂದೆಗೆ ಕೇಳಿರುತ್ತೇನೆ. ಆಗ ನನ್ನ ತಂದೆ ಒಂದೊಂದು ಆಸ್ತಿಯನ್ನು 1 ಮತ್ತು 2 ನೇ ಪ್ರತಿವಾದಿಗೆ ಬರೆಸುವಂತೆ ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ನಾನು 1990 ರಲ್ಲಿ ವಿಭಾಗವಾದ ನಂತರ 1997 ರಲ್ಲಿ ದಾವಾ ಐಟಂ ನಂ. 10 ನ್ನು 2 ನೇ ಪ್ರತಿವಾದಿ ಸ್ವಯಾರ್ಜಿತವಾಗಿ ಖರೀದಿಸಿದ ಆಸ್ತಿ ಎಂದರೆ ಸುಳ್ಳು. ಆಗ ಯಾವುದೇ ಭಾಗ ಆಗಿರುವುದಿಲ್ಲ. ಸದರಿ ಆಸ್ತಿ 2 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಯಾಗಿರುವ ಕಾರಣ ಕಂದಾಯದ ಎಲ್ಲಾ ದಾಖಲೆಗಳು ಅವರ ಹೆಸರಿನಲ್ಲಿಯೇ ಇದ್ದು, 2 ನೇ ಪ್ರತಿವಾದಿಯೇ ಸ್ವಾಧೀನದಲ್ಲಿದಾದ್ದರೆ ಎಂದರೆ ಸುಳ್ಳು. ದಾವಾ ಐಟಂ ನಂ. 11 ರ ಆಸ್ತಿಗಳು ಅಕ್ಕಪಕ್ಕದಲ್ಲಿವೆ ಎಂದರೆ ಹೌದು. ಸರ್ವೆ ನಂ. 159 ರಲ್ಲಿ 2 ನೇ ಪ್ರತಿವಾದಿ ಮನೆ ಕಟ್ಟಿಕೊಂಡು ವಾಸ ಇದ್ದಾರೆ ಹೌದು. ಒಟ್ಟು ಕುಟುಂಬದಲ್ಲಿ ಮನೆ ಕಟ್ಟಿದ್ದಾರೆ ಎಂದು ನುಡಿಯುತ್ತಾರೆ. ಸದರಿ ಮನೆಯಲ್ಲಿ 2 ನೇ ಪ್ರತಿವಾದಿಯೇ ವಾಸ ಇದ್ದಾರೆ ಎಂದರೆ ಹೌದು. ಅದೇ ರೀತಿ 1 ನೇ ಪ್ರತಿವಾದಿ ಬೇರೆ ಮನೆಯಲ್ಲಿ ವಾಸ ಮಾಡುತ್ತಿದ್ದಾರೆ ಎಂದರೆ ಸಾಕ್ಷಿ ಸದರಿ ಮನೆಯ ಮೊದಲನೇ ಮಹಡಿಯಲ್ಲಿ ನಾನು ಹಾಗೂ ನೆಲಮಹಡಿಯಲ್ಲಿ 1 ನೇ ಪ್ರತಿವಾದಿ ವಾಸ ಮಾಡುತ್ತಿದ್ದೇವೆ ಎಂದು ನುಡಿಯುತ್ತಾರೆ. ನಾವು ವಿಭಾಗ ಆದ ನಂತರದಿಂದ ಕುಟುಂಬ ನಿರ್ವಹಣೆಗಾಗಿ ಬೇರೆ ಬೇರೆ ಮಾಡುತ್ತಿದ್ದೇವೆ ಎಂದರೆ ಸಾಕ್ಷಿ ಈ ದಾವೆ ಸಲ್ಲಿಸಿದ ನಂತರ ಮನಸ್ತಾಪ ಉಂಟಾಗಿ ಬೇರೆ ನಿರ್ವಹಣೆ ಮಾಡುತ್ತಿದ್ದೇವೆ ಎಂದು ನುಡಿಯುತ್ತಾರೆ. ದಾವಾ ಐಟಂ ನಂ. 11 ರ ಆಸ್ತಿ 2 ನೇ ಪ್ರತಿವಾದಿಯ ಹೆಸರಿನಲ್ಲಿ ಕ್ರಯ ಆಗಿರುವ ಜಮೀನು ಎಂದರೆ ಹೌದು. ದಾವಾ ಐಟಂ ನಂ. 11 ರ ಆಸ್ತಿಗಳು ಖರೀದಿಸುವ ಸಮಯದಲ್ಲಿ ನನ್ನ ತಂದೆ ಬದುಕಿರಲಿಲ್ಲ. ಆ ಸಮಯದಲ್ಲಿ ನನ್ನ

ಹೆಸರಿನಲ್ಲಿ ಕ್ರಯ ಪತ್ರ ಬರೆಸಿಕೊಳ್ಳುವಂತೆ ಕೇಳಿದಾಗ ನನ್ನ ಅಣ್ಣ 1 ನೇ ಪ್ರತಿವಾದಿ, 2 ನೇ ಪ್ರತಿವಾದಿಯ ಹೆಸರಿನಲ್ಲಿ ಕ್ರಯ ಮಾಡುವಂತೆ ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ಅದೇ ರೀತಿ ಒಟ್ಟು ಕುಟುಂಬದ ಎಲ್ಲಾ ಸದಸ್ಯರ ಹೆಸರಿನಲ್ಲ ಖಾತೆ ಮಾಡುವಂತೆ ಕೇಳಿದಾಗ ನನ್ನ ಅಣ್ಣ ಅವರ ಹೆಸರಿನಲ್ಲಯೇ ಖಾತೆ ಮಾಡುವಂತೆ ಹೇಳಿರುತ್ತಾರೆ ಎಂದು ನುಡಿಯುತ್ತಾರೆ.

ಮುಂದೂವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು.)**

ಓ.ಹೇ.ಕೇ.ಸ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಹೊಸಕೋಟೆ.